CAREERINDIA

# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ

ಮಲ್ಲೇಶ್ವರಂ, ಬೆಂಗಳೂರು – 560 003

**KARNATAKA SCHOOL EXAMINATION AND ASSESSMENT BOARD**

**Malleshwaram, Bengaluru – 560 003**

## 2024-25ರ ಎಸ್.ಎಸ್.ಎಲ್.ಸಿ. ಮಾದರಿ ಪ್ರಶ್ನೆಪತ್ರಿಕೆ -1

## S.S.L.C. MODEL QUESTION PAPER-1 : 2024-25

## ವಿಷಯ : ದ್ವಿತೀಯ ಭಾಷೆ — ಕನ್ನಡ

## Subject : Second Language — KANNADA

**ವಿಷಯ ಸಂಕೇತ : 33-K** **Subject Code : 33-K**

ಸಮಯ : 3 ಗಂಟೆ ] [ Time : 3 Hours

ಗರಿಷ್ಠ ಅಂಕಗಳು : 80 ] [ Max. Marks : 80

---

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು ಒಟ್ಟು 38 ಪ್ರಶ್ನೆಗಳನ್ನು ಹೊಂದಿದೆ.
2. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
3. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ಸೂಚಿಸುತ್ತವೆ.
4. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

www.careerindia.com

[ Turn over

CAREERINDIA



**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ : 4 × 1 = 4**

1. ಪ್ರಥಮ ಪುರುಷ ಸರ್ವನಾಮ ಪದಕ್ಕೆ ಉದಾಹರಣೆಯಿದು

   (ಎ) ನೀನು (ಬಿ) ನಾನು

   (ಸಿ) ಅವನು (ಡಿ) ತಾವು

2. ಆದೇಶ ಸಂಧಿಗೆ ಸೇರಿದ ಪದವಿದು

   (ಎ) ಹೂದೋಟ (ಬಿ) ಊರೂರು

   (ಸಿ) ಶಾಲೆಯನ್ನು (ಡಿ) ದೇವಾಲಯ

3. ಸಾಮಾನ್ಯ ಅವ್ಯಯಕ್ಕೆ ಉದಾರಣೆಯಾಗಿರುವ ಪದ

   (ಎ) ಚೆನ್ನಾಗಿ (ಬಿ) ಜುಳುಜುಳು

   (ಸಿ) ಅಥವಾ (ಡಿ) ಬೇಡ

4. ವರ್ತಮಾನ ಕಾಲವನ್ನು ಸೂಚಿಸುವ ಪದ

   (ಎ) ನೋಡುವನು (ಬಿ) ನೋಡಿತು

   (ಸಿ) ನೋಡುತ್ತಿದ್ದಾನೆ (ಡಿ) ನೋಡಿದನು

www.careerindia.com

CAREERINDIA



**II. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : 12 × 1 = 12**

5. ಎಲ್ಲರಿಂದಲೂ ಮೋಸ, ವಂಚನೆಗೆ ಒಳಗಾಗುತ್ತಿರುವವರು ಯಾರು ?

6. ಪುಟ್ಟರಾಜರು ಖಾದಿ ಬಟ್ಟೆ ತೊಡಲು ನಿರ್ಧರಿಸಿದ್ದು ಏಕೆ ?

7. ಸಸ್ತನಿಗಳ ಆಶ್ರಯದಾಣಗಳು ಯಾವುವು ?

8. ವಿದ್ಯಾರ್ಥಿಗಳು ಕಾಫೀ ಕುಡಿಯಲು ಎಂತಹ ಕಪ್ಪುಗಳನ್ನು ಆರಿಸಿಕೊಂಡರು ?

9. ಗಂಗೆಯಲ್ಲಿ ತೇಲುತ್ತಿದ್ದ ನೂರಾರು ದೀಪಗಳು ಹೇಗೆ ಕಾಣುತ್ತಿದ್ದವು ?

10. ಗೋಪಾಲನು ಶಾಲೆಯಿಂದ ಮನೆಗೆ ಮರಳುವಾಗ ಏಕೆ ಭಯಪಡುತ್ತಿದ್ದನು ?

11. ಸಿದ್ಧಾರ್ಥನಿಗೆ ಮಹಾ ಬೆಳಕು ಎಲ್ಲಿ ಕಂಡಿತು ?

12. ಚೈತ್ರದಲ್ಲಿ ಯಾವುದರ ವಾಲಗ ನಡೆದಿರುತ್ತದೆ ?

13. ತಿಮಿರಕ್ಕೆ ವೈರಿ ಯಾವುದು ?

14. ಕುಣಿಗಲ್ ಕೆರೆ ಹೇಗೆ ತುಂಬಿದೆ ಎಂದು ಜನಪದರು ಹೇಳಿದ್ದಾರೆ ?

15. ಸಂತೆಯೊಳಗೊಂದು ಮನೆಯನ್ನು ಮಾಡಿದರೆ ಯಾವುದಕ್ಕೆ ಅಂಜ ಬಾರದು ?

16. ಕೌರವನ ಸೇನೆಯು ಉತ್ತರನಿಗೆ ಹೇಗೆ ಕಾಣಿಸಿತು ?

www.careerindia.com

CAREERINDIA



**III. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** **8 × 2 = 16**

17. ಬಾಲಕ ಪುಟ್ಟಯ್ಯ ಕಣ್ಣುಗಳನ್ನು ಕಳೆದುಕೊಂಡದ್ದು ಹೇಗೆ ?

18. ಹೆಡ್ ಮಾಸ್ತರರು ತಂದಿಟ್ಟ ಟ್ರೇನಲ್ಲಿ ಯಾವ ಯಾವ ತರಹದ ಕಪ್ಪುಗಳಿದ್ದವು ?

19. ಹರಿದ್ವಾರವನ್ನು ಲೇಖಕರು ಹೇಗೆ ವರ್ಣಿಸಿದ್ದಾರೆ ?

20. ಬನದ ಗೋಪಾಲನ ವೇಷಭೂಷಣಗಳು ಹೇಗಿದ್ದವು ?

21. ಸಿದ್ಧಾರ್ಥನಿಗೆ ನಾಡಿನ ಅರ್ಥ ತಿಳಿದ ಸಂದರ್ಭವನ್ನು ಕವಿ ಬಸವರಾಜ ಸಬರದವರು ಏನೆಂದು ಬಣ್ಣಿಸಿದ್ದಾರೆ ?

22. ಕರ್ಪೂರದ ಕೆಲಸವೇನು ? ಅದು ತನ್ನ ಕೆಲಸವನ್ನು ಹೇಗೆ ಪೂರೈಸುತ್ತದೆ ಎಂಬುದನ್ನು ವಿವರಿಸಿ.

23. ಹೊಳೆಯ ದಂಡೆಯ ಸಾಲಿನಲ್ಲಿ ಹಿಂದಿನ ಯಾವ ನೆನಪುಗಳಿವೆ ?

24. ಮಾನವೀಯ ಸಂಸ್ಕೃತಿಯಲ್ಲಿ ಹೂವು ಯಾವುದರ ಪ್ರತೀಕ ಉದಾಹರಣೆಯೊಡನೆ ವಿವರಿಸಿ.

**IV. ಕೆಳಗಿನ ಕವಿ / ಸಾಹಿತಿಯ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ :** **1 × 3 = 3**

25. ಅ.ರಾ. ಮಿತ್ರ

www.careerindia.com

CAREERINDIA



**V. ಕೆಳಗಿನ ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯಿರಿ : 1 × 3 = 3**

26. ಮೈಕೊಡವಿ ಎದ್ದ ಜಗ ಖಗ ಪಕ್ಷಿ ಪ್ರಾಣಿಗಳು
ಲಗುಬಗೆಯ ದಗದಕ್ಕೆ ಹೊರಟಂತಿದೆ
ಹೊಸತು ಜೀವೋಲ್ಲಾಸ ಜಗಿತ ಭಾವವಿಲಾಸ
ನೆಲ ಮುಗಿಲ ವಾಲಗವೆ ನಡೆದಂತಿದೆ.

**VI. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ : 1 × 3 = 3**

27. "ಬಾಲಕ ಪುಟ್ಟಯ್ಯ ಮರಿ ಕೋಗಿಲೆಯಂತೆ ಹಾಡುತ್ತಿದ್ದನು."

**VII. ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು, ವಿಸ್ತರಿಸಿ ಬರೆಯಿರಿ : 1 × 3 = 3**

28. ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ.

**ಅಥವಾ**

ಕೂಡಿ ಬಾಳಿದರೆ ಸ್ವರ್ಗಸುಖ.

**VIII. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ : 5 × 3 = 15**

29. "ಅವರು ಯಾರಿಗೂ ಮೋಸ, ವಂಚನೆ ಮಾಡುವವರಲ್ಲ."

30. "ಹಕ್ಕಿಗಳಿಗೆ ವಿಪರೀತ ಅಲಂಕಾರ ಪ್ರಜ್ಞೆ ಇದೆ."

31. "ಹೇಳುವ ಸತ್ಯವನ್ನು ಪ್ರಿಯವಾಗಿ ಹೇಳು."

32. "ಬೊಬ್ಬೆ ಹೊಡೆದಾವೆ ಬಾಳೆಮೀನು."

33. "ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ!"

www.careerindia.com

CAREERINDIA



**IX. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ : 1 × 4 = 4**

34. ಕೆಸರೊಳಿದ್ದರು ..............................................

..............................................................

..............................................................

................................................ ಸಾರ್ಥಕತೆಗೆ.

**ಅಥವಾ**

ಒಂದು ಬಾಣಕೆ ..............................................

..............................................................

..............................................................

..................................... ಹೋರಾಡು ಹಗಲಿರುಳು.

**X. ಕೆಳಗಿನ ಪ್ರಶ್ನೆಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 1 × 4 = 4**

35. ಸದ್ದು ಮಾಡದಿರು – ಕವಿತೆ ನೀಡುವ ಸಂದೇಶವೇನು ? ನೀವು ಮೆಚ್ಚುವ ಅಂಶಗಳೊಂದಿಗೆ ವಿವರಿಸಿ.

**ಅಥವಾ**

ಬದುಕಿನಲ್ಲಿ ಶಾಂತಿ ಮತ್ತು ಸದ್ದು ಇವುಗಳಲ್ಲಿ ಯಾವುದು ಹೆಚ್ಚು ಸುಖ ನೀಡುತ್ತದೆ ಎಂಬುದನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

**XI. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ : 1 × 4 = 4 ( 2 + 2 )**

36. ನಾವು ಯಾವುದೇ ಕಾರ್ಯದಲ್ಲಿ ಯಶಸ್ಸು ಸಾಧಿಸುವುದಕ್ಕೆ ಮೂರು ಅಂಶಗಳು ಅತ್ಯಗತ್ಯ. ಅವುಗಳೆಂದರೆ ಸತತ ಅಭ್ಯಾಸ, ಇಂದ್ರಿಯ ನಿಗ್ರಹ, ಶ್ರದ್ಧೆ. ನಿರಂತರವಾದ ಅಭ್ಯಾಸದಿಂದ ಅರ್ಥವಾಗದೇ ಇರುವ ಕಷ್ಟಕರ ವಿಷಯವನ್ನಾದರೂ ಅರ್ಥಮಾಡಿಕೊಳ್ಳಬಹುದು. ನಿರಂತರ ಅಭ್ಯಾಸದಿಂದ ಅಸಾಧ್ಯವಾದುದನ್ನು ಸಾಧಿಸಬಹುದು. ಸತತ ಅಭ್ಯಾಸ ಮನಸ್ಸನ್ನು ಏಕಾಗ್ರಗೊಳಿಸಿ ಆ ವಿಷಯದ ಮೇಲೆ ಪ್ರಭುತ್ವವನ್ನು

www.careerindia.com

CAREERINDIA



ಸಾಧಿಸುವಂತೆ ಮಾಡುತ್ತದೆ. ಇದು ನನ್ನಿಂದ ಸಾಧ್ಯ ಎಂಬ ಸಕಾರಾತ್ಮಕ ಮನೋಭಾವವನ್ನು ಮೂಡಿಸುತ್ತದೆ. ಒಂದೊಂದು ಇಂದ್ರಿಯಗಳು ಒಂದೊಂದು ಕಡೆ ಎಳೆಯುತ್ತಿದ್ದರೆ. ಗುರಿಯನ್ನು ಮುಟ್ಟಲು ಸಾಧ್ಯವಾಗುವುದಿಲ್ಲ. ಇಂದ್ರಿಯಗಳ ಮೇಲೆ ಹತೋಟಿಯನ್ನು ಸಾಧಿಸಬೇಕು. ಇಂದ್ರಿಯ ನಿಗ್ರಹ ಯಶಸ್ಸನ್ನು ಸಾಧಿಸುವಲ್ಲಿ ಪ್ರಮುಖವಾದ ಮೆಟ್ಟಿಲಾಗಿದೆ. ನಮ್ಮ ಬಾಳಿನ ಸಾರ್ಥಕತೆಗೆ ಶುದ್ಧ ಮತ್ತು ಪ್ರಾಮಾಣಿಕ ಮನಸ್ಸು ಅತ್ಯಗತ್ಯ. ಅಂತಹ ಮನಸ್ಸಿನ ಪ್ರಪ್ರಥಮ ಗುಣವೇ ಪರಿಪೂರ್ಣಶ್ರದ್ಧೆ. ಇದು ನಮ್ಮ ಮನಸ್ಸು ನೈಜ ಮತ್ತು ಒಳಿತಿನ ಮೌಲ್ಯವನ್ನು ತಾನೇತಾನಾಗಿ ಸ್ವೀಕರಿಸುವಂತೆ ಮಾಡುತ್ತದೆ. ಶ್ರದ್ಧೆ ನಮ್ಮನ್ನು ಗುರಿಯತ್ತ ಮುನ್ನುಗ್ಗಲು ಉತ್ಸಾಹವನ್ನು ತುಂಬಿರುವ ಶಕ್ತಿಯಾಗಿದೆ. ಪರಿಶ್ರಮ ಮತ್ತು ಪ್ರಾಮಾಣಿಕತೆಗಳೇ ಶ್ರದ್ಧೆಯ ಮೂಲಾಂಶಗಳು. ಶ್ರದ್ಧೆ ಒಂದು ಅಚಲವಾದ ಮತ್ತು ಕ್ರಿಯಾತ್ಮಕವಾದ ನಂಬಿಕೆ. ಇದು ನಮ್ಮನ್ನು ನಾವು ಕೈಗೊಂಡ ಕಾರ್ಯದಲ್ಲಿ ಮುನ್ನುಗ್ಗುವಂತೆ ಮಾಡುತ್ತದೆ. ಶ್ರದ್ಧೆ ಎಂದರೆ ಮನುಷ್ಯನ ಪ್ರಯೋಗಶೀಲವಾದ ಮನಸ್ಸು ಕೈಗೊಳ್ಳುವ ಸಾಹಸ ಎಂದು ತಿಳಿಯಬೇಕು. ಶ್ರದ್ಧೆಯುಳ್ಳವನಿಗೆ ಜ್ಞಾನವು ಲಭಿಸುತ್ತದೆ. ಶ್ರದ್ಧೆ ಜ್ಞಾನವನ್ನು ಸಮರ್ಥವಾಗಿ ಸ್ವೀಕರಿಸುವ ಪರಿಶುದ್ಧ ಮನಃಪಕ್ವತೆಯನ್ನು ನಮ್ಮಲ್ಲಿ ಉಂಟು ಮಾಡುತ್ತದೆ. ಶ್ರದ್ಧೆಯಿಲ್ಲದೆ ಕಲಿತ ಕಲಿಕೆ ಜ್ಞಾನವಾಗದು. ಶೈಕ್ಷಣಿಕ ಪರೀಕ್ಷೆಯಲ್ಲಾಗಲೀ ಜೀವನದ ಪರೀಕ್ಷೆಯಲ್ಲಾಗಲೀ ಸಂಪೂರ್ಣ ಯಶಸ್ಸನ್ನು ಗಳಿಸುವುದಕ್ಕೆ ಪರಿಪೂರ್ಣ ಶ್ರದ್ಧೆ ಇರಬೇಕು. ನಾವು ಶ್ರದ್ಧೆಯಿಂದ ಕೆಲಸ ಮಾಡಬೇಕೇ ಹೊರತು ಸ್ಪರ್ಧೆಯಿಂದ ಅಲ್ಲ. ಶ್ರದ್ಧೆಯಿಂದ ಮಾಡಿದ ಕೆಲಸಕಾರ್ಯಗಳು ಯಶಸ್ವಿಯಾಗುತ್ತವೆ. ಜೊತೆಗೆ ನಮಗೆ ಸಂತೃಪ್ತಿಯನ್ನು ನೀಡುತ್ತವೆ.

***ಪ್ರಶ್ನೆಗಳು :***

ಅ) ಯಶಸ್ಸಿನ ನಿಜವಾದ ಮೆಟ್ಟಿಲುಗಳಾವುವು ?

ಆ) ಶ್ರದ್ಧೆಯುಳ್ಳವರಿಗೆ ಜ್ಞಾನವು ಹೇಗೆ ಲಭಿಸುತ್ತದೆ ?



www.careerindia.com

CAREERINDIA



**XII. ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ : 1 × 4 = 4**

37. ವರದಕ್ಷಿಣೆ ಒಂದು ಸಾಮಾಜಿಕ ಪಿಡುಗು.

**ಅಥವಾ**

ಗುಡಿಕೈಗಾರಿಕೆಗಳ ಮಹತ್ವ.

**XIII. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ : 1 × 5 = 5**

38. ನಿಮ್ಮನ್ನು ಧಾರವಾಡ ಜಿಲ್ಲೆಯ ನವಲಗುಂದದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ರಾಜು' ಎಂದು ಭಾವಿಸಿಕೊಂಡು, 'ಸಸ್ಯಶ್ಯಾಮಲ' ಕಾರ್ಯಕ್ರಮಕ್ಕೆ ಸಸಿಗಳನ್ನು ಒದಗಿಸುವಂತೆ ಕೋರಿ ವಲಯ ಅರಣ್ಯಾಧಿಕಾರಿಗಳಿಗೆ ಒಂದು ಮನವಿ ಪತ್ರವನ್ನು ಬರೆಯಿರಿ.

**ಅಥವಾ**

ನಿಮ್ಮನ್ನು ಕೊಪ್ಪಳದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ಮೋಹನ್' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ಆಚರಿಸಿದ 'ಸ್ವಚ್ಛತಾ ಸಪ್ತಾಹ' ಕಾರ್ಯಕ್ರಮದ ಕುರಿತು ಬಳ್ಳಾರಿಯ ಆಝಾದ ನಗರದ ನಿವಾಸಿಯಾದ 'ರಹೀಮ್' ಎಂಬ ಹೆಸರಿನ ಗೆಳೆಯನಿಗೆ ಒಂದು ಪತ್ರವನ್ನು ಬರೆಯಿರಿ.

www.careerindia.com